**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆ ಇಲಾಖೆ**
**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ**
**ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ 'ರೇಡಿಯೋ ಕಮ್ಯುನಿಕೇಷನ್ ಉಪಕರಣಗಳ' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಮೌರ್ಯ ಇನ್‌ಫೋಟೆಕ್ ಪ್ರೈ. ಲಿ., ಬೆಂಗಳೂರು-560038. ಇವರ ಅರ್ಜಿಯ ದಿ.12-12-2013, (ಟಿನ್: 29110327181)

***

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿಯಲ್ಲಿ ನೋಂದಣಿದಾರರಾದ ಮೆ: ಮೌರ್ಯ ಇನ್‌ಫೋಟೆಕ್ ಪ್ರೈ. ಲಿ., "ಶಿವ ಗಂಗಾ". ನಂ.558, 17ನೇ ಅಡ್ಡ ರಸ್ತೆ, ಇಂದಿರಾನಗರ, 2ನೇ ಹಂತ, ಬೆಂಗಳೂರು - 560038 ಇವರು ಮೇಲ್ಕಂಡ ಅರ್ಜಿಯಲ್ಲಿ 'ರೇಡಿಯೋ ಕಮ್ಯುನಿಕೇಷನ್ ಉಪಕರಣಗಳ' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ),ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆಸಿಎಲ್‌ಆರ್/ಸಿಆರ್. 135/13-14, ದಿ. 20-05-2014**

'ರೇಡಿಯೋ ಕಮ್ಯುನಿಕೇಷನ್ ಉಪಕರಣಗಳ' ಮೇಲೆ ಅನ್ವಯಿಸುವ ತೆರಿಗೆ ದರಗಳು ಕೆಳಕಂಡಂತೆ ಇರುತ್ತವೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

| ಕ್ರ.ಸಂ. | ಉತ್ಪನ್ನದ ಹೆಸರು | ತೆರಿಗೆ ದರ |
|---|---|---|
| 1 | ಸಿಇಟಿ ಕೋಡ್ 8525.60.11 ರಲ್ಲಿ ಒಳಪಡುವ ವಾಕೀ ಟಾಕೀ ಸೆಟ್ | ದಿನಾಂಕ: 23.03.2007ರ ಅಧಿಸೂಚನೆ-II ಸಂಖ್ಯೆ: ಎಫ್‌ಡಿ 43 ಸಿಎಸ್‌ಎಲ್ 2007 ರೊಡನೆ ಓದಿಕೊಂಡಂತೆ ದಿನಾಂಕ: 06.04.2006ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 116 ಸಿಎಸ್‌ಎಲ್ 2006(16) ರಂತೆ ದಿನಾಂಕ: 01.08.2012 ರಿಂದ ಶೇಕಡ 5.5. |
| 2 | ಸಿಇಟಿ ಕೋಡ್ 8529.10 ರಲ್ಲಿ ಒಳಪಡುವ ಆಂಟೆನಾ ಮತ್ತು ಏರಿಯಲ್ | ದಿನಾಂಕ: 31.03.2006ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 116 ಸಿಎಸ್‌ಎಲ್ 2006(9) ರಂತೆ ದಿನಾಂಕ: 01.08.2012 ರಿಂದ ಶೇಕಡ 5.5. |

.......2

| | | |
|---|---|---|
| 3 | ಬ್ಯಾಟರಿ ಚಾರ್ಜರ್ | 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)(iii)ರಂತೆ ದಿನಾಂಕ 01.08.2012ರಿಂದ ಶೇಕಡ 14.5. |
| 4 | ಬ್ಯಾಟರಿ | |

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ),ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು